ಮೋಡಿಗೊಳಗಾದವಳಂತೆ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು, ಸುತ್ತಿದ ಕವರನ್ನು ಬಿಚ್ಚುತ್ತಿದ್ದಂತೆ ಮರೂನು ಬಣ್ಣದ ಚರ್ಮದ ಬ್ಯಾಗು ಮೆತ್ತಗೆ ಕೈಗೆ ಸ್ಪರ್ಶಿಸಿ ಮೈನವಿರೇಳಿಸಿತು. ಮನಸು ತುಂಬಿ ಬಂದು ಅದನ್ನು ಎದೆಗೊತ್ತಿಕೊಂಡಳು. ಇದವಳ ಜೀವಮಾನದಲ್ಲಿ ದೊರೆತ ಮೊದಲ ನಿಜವಾದ ಉಡುಗೊರೆ! ಬಟಾಬಯಲ ಏಕತಾನದಲ್ಲಿ ಹರಿದುಕೊಂಡಿದ್ದ ಹಳ್ಳಕ್ಕೆ ಮೀನೊಂದು ಪಿಸುಗುಟ್ಟಿತ್ತು. ಅವಳ ಜೀವನದಲ್ಲಿ ಮೊದಲ ಬಾರಿ ಪ್ರೀತಿಯ ಸಂವೇದನೆಯಾಗಿತ್ತು. ಅಂಗಾಲಿಂದ ನೆತ್ತಿಯವರೆಗೆ ಸಂಚರಿಸುತ್ತಿದ್ದ ಮುದವನ್ನು ಅನುಭವಿಸುತ್ತ ಕುಳಿತಿದ್ದಳು, ಬಾಗಿಲು ತಟ್ಟುವ ಸದ್ದು ಬರುವವರೆಗು. ಬ್ಯಾಗನ್ನು ಕಪಾಟಿನಲ್ಲಿಟ್ಟು ಬಾಗಿಲು ತೆರೆದಳು. ಕಮಲಮ್ಮ ನಾಯ್ಡು ಬಂದಿರುವ ಸುದ್ದಿಯನ್ನು ಕೊಟ್ಟಳು. ಆವತ್ತು ಬೆಳಗಿಂದ ಮಧ್ಯಾಹ್ನದವರೆಗೂ ಚಿತ್ರೀಕರಣವಿರುವುದು ಅವಳಿಗೆ ಗೊತ್ತಿತ್ತು.

ಸಾಯಂಕಾಲ, ಬಕುಲಾ ಆನಂದನ ಹತ್ತಿರ, ಅಷ್ಟು ನೆಲ್ಲಿಕಾಯಿ ತಂದರೆ ಉಪ್ಪಿನಕಾಯಿ ಹಾಕಬಹುದಿತ್ತು ಅನ್ನುವುದು ಕಿವಿಗೆ ಬಿತ್ತು. ಅವಳಿಗೆ ಸತತ ಚಿತ್ರೀಕರಣದಿಂದ ನಿಜಕ್ಕೂ ಸುಸ್ತಾಗಿತ್ತು. ಆದರೆ ಹೋಗುವ ಬಯಕೆ ಅದನ್ನೂ ಮೀರುತ್ತಿತ್ತು. ತಾನೂ ಬರಲಾ... ತನಗು ನೆಲ್ಲಿಕಾಯಿ ಬೇಕು ಅಂತ ಕೇಳಿದಳು ಆನಂದನ ಹತ್ತಿರ. ಧಾರಾಳವಾಗಿ ಬರಬಹುದು ಅಂದ ಆನಂದ. ಇಬ್ಬರೂ ಹೊರಟರು. ಆ ದಾರಿಯಲ್ಲಿ ಹೋಗಿ ಸುಮಾರು ದಿವಸವಾಗಿತ್ತು. ಬೆಂಕಿಯಲ್ಲಿ ಸುಟ್ಟು ಕರಡದ ಬುಡವೆಲ್ಲ ಬೂದಿಯಾಗಿತ್ತು. ದಾರಿಯ ಎರಡೂ ಕಡೆ ಅಲ್ಲಲ್ಲಿ ಬೆಟ್ಟನೆಲ್ಲಿ ಗಿಡಗಳಲ್ಲಿ ಬಲಿತ ಕಾಯಿಗಳು ರೆಂಬೆಯುದ್ದಕ್ಕು ಕಚ್ಚಿಕೊಂಡಿದ್ದವು. ಆನಂದ ಒಂದು ರೆಂಬೆಯನ್ನು ಬಾಗಿಸಿ ಹಿಡಿದು 'ಏ ಸುಕುಮಾರಿ, ಬಾ ಕೊಯ್ದುಕೋ' ಅಂದ. 'ಸುಕುಮಾರಿ ಅಂತೀರ, ಮತ್ತೆ ಕೆಲಸವನ್ನೂ ಹಚ್ಚತೀರ!' ಅಂತ ಹತ್ತಿರ ಹೋಗಿ ಕಾಲೆತ್ತರಿಸಿ ಕಾಯಿ ಕೀಳಲುತೊಡಗಿದಳು. ಆನಂದ ಒಂದು ಕಾಯನ್ನು ಕಚ್ಚಿ ತಿಂದು 'ವಾವ್!' ಅಂತ ಉದ್ಗರಿಸಿದ. 'ಒಬ್ರೇ ತಿಂತೀರಾ, ಇಷ್ಟೇನಾ?' ಕೇಳಿದಳು, ಛೇಡಿಸುವ ದನಿಯಲ್ಲಿ. ಕೈಯಲ್ಲಿ ಹಿಡಿದ ಕಾಯನ್ನೊಮ್ಮೆ ನೋಡಿ ಅವಳತ್ತ ನೋಡಿದ. ಹೌದು ಅನ್ನುವಂತೆ ಕಣ್ಣು ಮಿಟುಕಿಸಿದವಳು ಕೈ ಚಾಚಿ ಅದನ್ನಿಸಿದುಕೊಂಡು ಹಲ್ಲಲ್ಲಿ ಕಚ್ಚಿ ಆಸ್ವಾದಿಸಿದಳು. ಮುಖದ ತುಂಬ ಸಂಭ್ರಮ ಆವರಿಸಿಕೊಂಡಿತು. ನಂಗೂ ಅನ್ನುವಂತೆ ಕೈ ಚಾಚಿದ. ಊಹುಂ ಅನ್ನುವಂತೆ ತಲೆಯಾಡಿಸಿ ಮತ್ತೊಂದು ಚೂರು ಕಚ್ಚಿ ಜಗಿಯತೊಡಗಿದಳು. ಆನಂದ ತಟ್ಟನೆ ಅವಳ ಕೈಯಿಂದ ಕಸಿದುಕೊಂಡು ಬಾಯೊಳಗೆ ಹಾಕಿಕೊಂಡು, ಹೇಗಿದೆ? ಅಂತ ಕಣ್ಣಲ್ಲೆ ಛೇಡಿಸಿದ. ಆಟವಾಡುತ್ತ ಚೀಲದ ತುಂಬ ಕಾಯಿ ಕಿತ್ತು ಮುಗಿಸಿದಾಗ ಕತ್ತಲೆಯಾವರಿಸಿತ್ತು.

ಆನಂದ ಮತ್ತು ಚಂದನಿಕಾರ ಸ್ನೇಹ ಮೊದಲ ಬಾರಿ ಬಕುಲಾರ ಆಲೋಚನೆಯಲ್ಲಿ ಸುಳಿಯಿತು. ಒಂದೇ ಮನೆಯಲ್ಲಿರುವಂತೆ ಇದ್ದಾರೆ. ಪರಿಚಯದ ನಂತರ ಸಲುಗೆ ಸಹಜ, ಅದರಲ್ಲೂ ಈಗಿನ ಕಾಲದ ಕಲಿತ ಹುಡುಗರು, ಅನಿಸುತ್ತಿತ್ತು. ಸೀಮಂತಿನಿ ಬಂದು ಹೋದದ್ದರ ಪರಿಣಾಮ ತನ್ನಲ್ಲಿ ಈ ದಿಶೆಯಲ್ಲಿ ಯೋಚಿಸಲು ಪ್ರಚೋದನೆ ನೀಡುತ್ತಿದೆಯೆ ಅನ್ನುವ ಜಿಜ್ಞಾಸೆ ಸುಳಿದು ಹೋಯಿತು. ಮನೆತನ, ಘನತೆ ಇವೆಲ್ಲ ರಕ್ತಗತವಾಗಿ ಬರುವುದು ಅನ್ನುವುದನ್ನು ನಂಬುವವರಲ್ಲ ಅವರು. ಅದೆಲ್ಲ ಬೆಳೆಯುವಾಗಿನ ಸಂಸ್ಕಾರ, ಆಚರಣೆ, ವಿದ್ಯೆ ಕೊಡುವುದು ಅಂತ ತಿಳಿದವರು. ಚಂದನಿಕಾ ಚಂದದ ಹುಡುಗಿ, ಸಂದೇಹವೆ ಇಲ್ಲ. ಇಷ್ಟು ದಿನದಿಂದ ನೋಡಿದ್ದಾರೆ. ಚೆಲ್ಲುತನವಾಗಲಿ, ಒಣ ಜಂಭವಾಗಲಿ ಇಲ್ಲ. ವಿದ್ಯೆಯು ಇದೆ. ಮದುವೆಯಾಗಿ ಬಂದರೆ ಗೌರವಯುತವಾಗಿ ಸಂಭಾಳಿಸುವ ತಾಕತ್ತಿದ್ದವಳು. ಆದರೆ ನಟಿಯಾಗಿ ಹೆಸರು ಮಾಡಿದವಳು; ಗ್ಲಾಮರ್ ಜಗತ್ತಿನವಳು. ಅದನ್ನು ಬಿಟ್ಟು ಇಲ್ಲಿರುತ್ತಾಳೆಯೇ? ಬಿಟ್ಟು ಹೋದರೆ, ಅಥವ ಮನಸು ಮುರಿದರೆ ಅದರ ಪರಿಣಾಮ ಏನಾಗಬಹುದು ಅನ್ನುವ ವಿಚಾರ ಬರುತ್ತದೆ. ಪ್ರಥಮ ಆಕರ್ಷಣೆಯ ಉನ್ಮಾದದಲ್ಲಿ ಹೆಚ್ಚುಕಮ್ಮಿಯಾದರೂ ಆನಂದನಿಗೇ ಕೆಟ್ಟ ಹೆಸರು, ನೋವು. ವಿಚಲಿತರಾದರು. ಮರುಕ್ಷಣ, ತಾನು ಯಾಕೆ ಇಲ್ಲದ್ದು ಕಲ್ಪಿಸಿಕೊಂಡು ತಲೆ ಕೆಡಿಸಿಕೊಳ್ಳುವುದು? ಅಲ್ಲದೆ, ಆನಂದನ ವಿಷಯದಲ್ಲಿ ಅಪನಂಬಿಕೆಯ ವಿಚಾರ ತನ್ನಲ್ಲಿ ಬರಕೂಡದು ಅನಿಸಿ ವಿಚಾರವನ್ನು ಬೇರೆ ಕಡೆ ಹರಿಸಿದರು.

***

ಮಂಚದ ಮೇಲೆ ಚಂದನಿಕಾ ಅಂಗಾತ ಮಲಗಿದ್ದಳು. ಆದರೆ ನಿದ್ರೆ ಹತ್ತುತ್ತಿರಲಿಲ್ಲ. ಇವತ್ತು ಸಿಕ್ಕ ಏಕಾಂತ, ಏಕಾಂತವೆಂದರೆ ಹೇಗಿರುತ್ತದೆ ಅನ್ನುವುದನ್ನು ಹೇಳಿತ್ತು. ಚಿತ್ರೀಕರಣದ ಸೆಟ್ ಮೇಲೆ ಹೇಳುವ ದೊಡ್ಡದೊಡ್ಡ ಶಬ್ದಗಳು, ಮುಖದಲ್ಲಿ ತೋರಿಸುವ ವಿಧವಿಧ ಭಾವಗಳೆಲ್ಲ ಯಾವ ಲೆಕ್ಕಕ್ಕು ಇಲ್ಲ ಅನ್ನುವುದು ಅವಳಿಗೆ ಅರಿವಾಗಿತ್ತು. ಇಲ್ಲಿ ಮತ್ತೇನಿರುವುದಿಲ್ಲ. ಶಬ್ದಗಳ ಅವಶ್ಯಕತೆಯೆ ಇಲ್ಲ. ಅದೊಂದು ಅನನ್ಯ ಇರುವಿಕೆ ಅಂದುಕೊಂಡವಳು ಆ ಬ್ಯಾಗನ್ನು ಮತ್ತಷ್ಟು ಎದೆಗೊತ್ತಿಕೊಂಡಳು. ಇದ್ದಕ್ಕಿದ್ದಂತೆ ಸಣ್ಣ ಭಯ ಆವರಿಸಿಕೊಳ್ಳತೊಡಗಿತು. ಇದೆಲ್ಲ ಮುಂದೆ ಹೇಗೆ ಸಾಗಬಹುದು? ಗಮ್ಯ ತಲುಪುವುದೆಂದರೆ ತನ್ನ ಮತ್ತು ಆನಂದನ ಮದುವೆಯಂತೂ ಆಗಲೇಬೇಕು. ಇದಕ್ಕೆ ಅವನ ಅಜ್ಜ ಅಜ್ಜಿ ತನ್ನನ್ನೊಪ್ಪಿ ಸ್ವೀಕರಿಸುವರೆ? ದೇಶ್ವಂತರ ಕುಟುಂಬ, ರಾಜರ ಕಾಲದಿಂದ ಬಂದ ವಂಶ ಅನ್ನುವ ಹೆಮ್ಮೆ ಅವರಿಗಿದೆ. ತಾನೇನಾದರೂ ದುಡುಕಿ ತಪ್ಪು ನಿರ್ಧಾರ ಮಾಡಿಬಿಟ್ಟೆನೇ ಅನಿಸಿತು. ಆದರೆ, ನಿರ್ಧಾರ ಅನ್ನುವುದೆ ಸರಿಯಲ್ಲ. ಇದು ಘಟಿಸಿಬಿಟ್ಟಿತು... ಯೋಜನೆ ಹಾಕಿ, ಬರೆದು ಕಂಠಪಾಠ ಮಾಡಿ, ರಿಹರ್ಸಲ್ ಮಾಡಲು ನಟನೆಯಲ್ಲವಲ್ಲ! ಆಗಿಬಿಟ್ಟಿತು ಅಷ್ಟೆ. ಅದೇ ಉತ್ತರ. ಅಧೀರತೆ ಕಾಡತೊಡಗಿ ಮಗ್ಗುಲಾದಳು. ಆನಂದ, ತಾನು ನಟಿ ಅನ್ನುವ ಆಕರ್ಷಣೆಗೆ ಬಿದ್ದದ್ದು ಅನ್ನುವ ಕಲ್ಪನೆ ಸಹ ಸಾಧ್ಯವಿಲ್ಲ ಅಂತ ಮನಸು ಸಾರುತ್ತಿತ್ತು. ಬೇಕಷ್ಟು ಅವಕಾಶ ಅವನಿಗೆ ಸಿಕ್ಕಿತ್ತು. ತನ್ನನ್ನು ಸ್ಪರ್ಶಿಸಲೇಕೆ ಅಪ್ಪಿಕೊಳ್ಳುವ ಅವಕಾಶ ಸಹ ಅವನಿಗಿತ್ತು. ಆದರೆ ಪ್ರಯತ್ನಿಸಲೂ ಇಲ್ಲ. ಬಣ್ಣಬಣ್ಣದ ಮಾತುಗಳನ್ನು ಸಹ ಬಳಸಲಿಲ್ಲ ಅನ್ನುವುದು ಲಕ್ಷ್ಯಕ್ಕೆ ಬಂತು. ಸಲ್ಲದ ಊಹಾಪೋಹ ಮಾಡಿ ಮನಸು ಕೆಡಿಸಿಕೊಳ್ಳುವುದು ಬೇಡ, ಅವನ ಜೊತೆ ಮಾತಾಡಿದರೆ ಸಮಾಧಾನವಾಗುತ್ತದೆ ಅನ್ನುವ ಯೋಚನೆಯಿಂದ ಸಾಂತ್ವನ ಸಿಕ್ಕಿತು.

***

ಧಾರಾವಾಹಿಯ ಜನಪ್ರಿಯತೆ ಆ ಮನೆಯನ್ನೂ ಜನಜನಿತಗೊಳಿಸುತ್ತ ಹೋಗಿತ್ತು. ಪಾತ್ರದ ಸಂಭಾಷಣೆಗಳಲ್ಲಿ ಮತ್ತು ಧಾರಾವಾಹಿಯ ಬಗ್ಗೆ ಪತ್ರಿಕೆಗಳಲ್ಲಿ ಬರೆಯುವಾಗೆಲ್ಲ ಬಳಸುವ ಶಬ್ದದಿಂದಾಗಿ ಅದರ ಹೆಸರು 'ಪುರಾತನ ಭವನ' ಅಂತಲೆ ಆಗಿಹೋಯಿತು. ಒಂದು ಮುಂಜಾನೆ, ಶಾಲಾ ಮಕ್ಕಳ ಪ್ರವಾಸಿ ವಾಹನವೊಂದು ಗೇಟೆದುರು ಬಂದು ನಿಂತಿತು. ಅಧ್ಯಾಪಕರು, ತಾವು ಬೇರೆ ಜಿಲ್ಲೆಯಿಂದ ಬಂದವರೆಂತಲೂ, ಮಕ್ಕಳು ಪುರಾತನ ಭವನವನ್ನು ನೋಡಲು ತುಂಬಾ ಆಸೆಪಡುತ್ತಾರೆಂತಲು ವಿನಂತಿಸಿಕೊಂಡರು. ದೇಶ್ವಂತರು ಸಂದಿಗ್ಧಕ್ಕೆ ಸಿಲುಕಿದರು. ಮಕ್ಕಳ ಆಸೆಯನ್ನು ಭಂಗಿಸಲು ಮನಸು ಬರುವುದಿಲ್ಲ. ಹಾಗಂತ ತಮ್ಮ ನೆಮ್ಮದಿಯ ಏಕಾಂತಕ್ಕೆ ಭಂಗ ತಂದುಕೊಳ್ಳಲೂ ಮನಸಿಲ್ಲ. ಆಮೇಲೆ, ಇದೊಂದು ಸಾರಿ ಅಂತ ನಿರ್ಧರಿಸಿ ಒಳಗೆ ಬಿಟ್ಟರು. ಮಕ್ಕಳು ಬೆರಗುಗಣ್ಣಿಂದ ಮೇಲೆ ಕೆಳಗೆಲ್ಲ ನೋಡುತ್ತಾ, ಎಲ್ಲಾ ಮಣ್ಣಿಂದೇ ಕಟ್ಟಿದ್ದಾ ಅಂತ ಉದ್ಗರಿಸುತ್ತ, ಅದ್ಭುತವೊಂದನ್ನು ಮುಟ್ಟಿಮುಟ್ಟಿ ಆಸೆ ತಣಿಸಿಕೊಳ್ಳುವುದು ಮನೆಯವರನ್ನು ಮುದಗೊಳಿಸಿತು.

ಇಷ್ಟುಕಾಲ ತಮ್ಮೂರಲ್ಲೆ ಇದ್ದರೂ ಅದೊಂದು ವಿಶೇಷ ಅನ್ನಿಸದ ಊರವರಿಗೂ ಈಗ ಆಕರ್ಷಣೆಯಾಗುತ್ತಿತ್ತು. ಮದುವೆ ಮುಂಜಿ ಅಂತ ಆ ಮನೆಯವರನ್ನು ಆಮಂತ್ರಿಸಲು ಬರುವವರು ಮನೆಯನ್ನೆಲ್ಲ ಹೊಸದಾಗಿ ನೋಡುವವರಂತೆ ಕಣ್ಣು ತುಂಬಿಕೊಳ್ಳುತ್ತಿದ್ದರು. ತಹಶೀಲ್ದಾರರ ಮಗನಿಗೆ ಮದುವೆಯಾಯಿತು. ಹೊಸ ಬೀಗರಿಗೆ ಈ ಭವನವನ್ನು ನೋಡುವ ಆಸೆಯಾಯಿತು. ತಹಶೀಲ್ದಾರರು ಫೋನಿನಲ್ಲಿ ದೇಶ್ವಂತರನ್ನು ಸಂಪರ್ಕಿಸಿದರು. ಬನ್ನಿ ಅನ್ನಲೇಬೇಕಾಯ್ತು. ತಹಶೀಲ್ದಾರರೂ ಜೊತೆಯಲ್ಲಿ ಬಂದು ಇವರ ಆತಿಥ್ಯ ಸ್ವೀಕರಿಸಿ ಸಂತೋಷಪಟ್ಟರು. ರಾಜಕೀಯ ವ್ಯಕ್ತಿಗಳ ಬಂಧುಗಳು, ಮಿತ್ರರು ಹೀಗೆ ಕುತೂಹಲದಿಂದ ಬರುವವರಲ್ಲಿದ್ದರು. ಭವನದಿಂದಾಗಿ ಧಾರಾವಾಹಿಯ ಸನ್ನಿವೇಶಗಳು ತೂಕವನ್ನೇರಿಸಿಕೊಂಡಂತೆ, ಆ ಭವನವೂ ನೋಡುಗರ ಮನಸಲ್ಲಿ ಸೆಳೆತವನ್ನುಂಟುಮಾಡಿ ಹೆಸರುವಾಸಿಯಾಗತೊಡಗಿತ್ತು. ಇದೆಲ್ಲ ಆ ಮನೆಯವರ ಸಂಪರ್ಕವಲಯವನ್ನು ವಿಸ್ತರಿಸುತ್ತಿತ್ತು. ಅವರಲ್ಲಿ ಅಧಿಕಾರಿಗಳು, ಪ್ರಭಾವಿ ವ್ಯಕ್ತಿಗಳು, ಪತ್ರಕರ್ತರು ಇದ್ದರು. ಈ ವಿಸ್ತರಿಸುವ ವಲಯ ತಮ್ಮ ಶಕ್ತಿಯನ್ನು ವರ್ಧಿಸುವಂತೇ ತಮ್ಮ ಸ್ವಾತಂತ್ರ್ಯವನ್ನೂ ಅಷ್ಟಿಷ್ಟು ಕಡಿಮೆ ಮಾಡುತ್ತದೇನೋ ಅನ್ನುವ ಭಯವೂ ಆಗುತ್ತಿತ್ತು ಒಮ್ಮೊಮ್ಮೆ.

**(ಸಶೇಷ)**